ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಾದ್ಯಂತ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಒಟ್ಟು 22316 ಎಕರೆ 15 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಸದರಿ ಜಮೀನುಗಳನ್ನು ಹಂಚಿಕೆ ಮಾಡಿರುವ ವಿವರಗಳನ್ನು ಅನುಬಂಧ–1ರ ಕಲಂ 1ಮತ್ತು 6ರಲ್ಲಿ ನಮೂದಿಸಲಾಗಿದೆ.

ಇ) ಈ ಪೈಕಿ ಒಟ್ಟು 6708 ಎಕರೆ 081/4 ಗುಂಟೆ ಜಮೀನನ್ನು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಹಾಗೂ 416 ಎಕರೆ 061/4 ಗುಂಟೆ ಜಮೀನನ್ನು ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಭೂಸ್ವಾಧೀನ ಕ್ರಮದಿಂದ ಕೈಬಿಡಲಾಗಿದೆ.

ಈ) ಭೂಸ್ವಾಧೀನ ಕ್ರಮದಿಂದ ಕೈಬಿಟ್ಟ ಜಮೀನು ಸಂಬಂಧಿಸಿದ ಭೂಮಾಲೀಕರಿಗೆ ಸೇರಿದ್ದಾದ್ದರಿಂದ ಸದರಿ ಜಮೀನಿಗೆ ಸಂಬಂಧಿಸಿದಂತೆ ನಂತರದ ವಹಿವಾಟುಗಳ ಮಾಹಿತಿಯು ಮಂಡಳಿಯಲ್ಲಿ ಲಭ್ಯವಿರುವುದಿಲ್ಲ.

ಉ) ಭೂಸ್ವಾಧೀನ ಕ್ರಮದಿಂದ ಕೈಬಿಟ್ಟ ಜಮೀನು ಅಧಿಸೂಚಿತ ಭೂಮಾಲೀಕರಿಗೆ ಸೇರಿದ್ದಾಗಿರುತ್ತದೆ. ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಕಾರ್ಯಾಗಾರ ಸಹಾಯಕರುಗಳಿಗೆ ಮುಂಬಡ್ತಿ ನೀಡುವುದು

101(352) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಎಷ್ಟು ವರ್ಷಗಳಾಗಿವೆ ಹಾಗೂ ನಿಯಮಗಳಿಗೆ ಹೊಸದಾಗಿ ತಿದ್ದುಪಡಿ ತರಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗಿದೆ (ವಿವರ ಒದಗಿಸುವುದು);

ಆ) ಕಾರ್ಯಾಗಾರ ಸಹಾಯಕರುಗಳಿಗೆ ಮುಂಬಡ್ತಿ ನೀಡಲು ಕಾ.ಇ/43/ಇಟಿಎ/2009ರ ದಿನಾಂಕ 12–11–2010ರಂದು ರಾಜ್ಯ ವಿಶೇಷ ಪತ್ರಿಕೆಯಲ್ಲಿ

ಕರಡು ಅಧಿಸೂಚನೆ ಹೊರಡಿಸಿ ಸುಮಾರು ಎರಡು ತಿಂಗಳು ಕಳೆದರೂ ಅಂತಿಮ ಕರಡು ಅಧಿಸೂಚನೆ ಹೊರಡಿಸಲು ಕ್ರಮ ತೆಗೆದುಕೊಳ್ಳದೇ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದಿನಾಂಕ 30–11–2010ರಂದು ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಅರ್ಜಿ ಸಮಿತಿ ಮುಂದೆ ಹಾಜರಾಗಿ ಕಾರ್ಯಗಾರ ಸಹಾಯಕರುಗಳಿಗೆ 2010ರ ವರ್ಷಾಂತ್ಯದಲ್ಲಿ ಮುಂಬಡ್ತಿ ನೀಡುವುದಾಗಿ ತಿಳಿಸಿದ್ದರೂ ಸಹ ಇದೂವರೆವಿಗೂ ಯಾವ ಕ್ರಮ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕಾರ್ಯಾಗಾರ ಸಹಾಯಕರು ಸುಮಾರು 15 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇನ್ನೆಷ್ಟು ದಿನಗಳಲ್ಲಿ ಮುಂಬಡ್ತಿ ಕಲ್ಪಿಸಲಾಗುವುದು? (ದಿನಾಂಕದೊಂದಿಗೆ ವಿವರ ಒದಗಿಸುವುದು)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)

ಅ) ಪ್ರಸ್ತುತ ಚಾಲ್ತಿಯಲ್ಲಿರುವ ಇಲಾಖೆಯ ನಿಯಮಾವಳಿಗಳನ್ನು 1998ನೇ ಸಾಲಿನಲ್ಲಿ ರೂಪಿಸಲಾಗಿರುತ್ತದೆ. 2004ರಲ್ಲಿ ಒಂದು ತಿದ್ದುಪಡಿಯಾಗಿದೆ. ಸದರಿ ನಿಯಮಾವಳಿಗಳನ್ನು ಪರಿಷ್ಕರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈಗಾಗಲೇ ಹೊರಡಿಸಿರುವ ಕರಡು ಅಧಿಸೂಚನೆಗೆ ಸಿಆಸು ಇಲಾಖೆಯು ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನಲೆಯಲ್ಲಿ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಮೇಲಿನಂತೆ.

ಈ) ಹೌದು. ಅಂತಿಮ ಆದೇಶ ಜಾರಿಗೊಳಿಸಿದ ತಕ್ಷಣ ಮುಂಬಡ್ತಿಗೆ ಕ್ರಮ ಕೈಗೊಳ್ಳಲಾಗುವುದು.

ಉದ್ದಿಮೆದಾರರಿಗೆ ಮೂಲಭೂತ ಸೌಕರ್ಯ ಒದಗಿಸುವುದು

104(161) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?